# ಹಸಿರೇ ಉಸಿರು

## ಪೀಠಿಕೆ:

ಹಸಿರು ಎಂದರೆ ಜೀವನ. ಹಸಿರು ಮರಗಳು, ಗಿಡಗಳು, ಹುಲ್ಲು ಇವುಗಳೇ ನಮ್ಮ ಉಸಿರಿಗೆ ಆಧಾರ. ಮರಗಳು ಆಮ್ಲಜನಕವನ್ನು ಕೊಡುತ್ತವೆ. ಆಮ್ಲಜನಕವಿಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ಆದ್ದರಿಂದ ಮರಗಳನ್ನು ನೆಡುವುದು, ಹಸಿರು ಉಳಿಸುವುದು ನಮ್ಮ ಕರ್ತವ್ಯ.

## ವಿಷಯ ನಿರೂಪಣೆ:

ಇಂದಿನ ದಿನಗಳಲ್ಲಿ ಅರಣ್ಯಗಳನ್ನು ಕಡಿದು ಮನೆ, ಕಾರ್ಖಾನೆ, ರಸ್ತೆ ಮಾಡುತ್ತಿದ್ದಾರೆ. ಮರಗಳು ಕಡಿಮೆಯಾದಾಗ ಮಳೆ ಕಡಿಮೆಯಾಗುತ್ತದೆ. ಬಿಸಿಲು ಹೆಚ್ಚುತ್ತಿದೆ. ವಾತಾವರಣದಲ್ಲಿ ಬದಲಾವಣೆ ಕಾಣುತ್ತಿದೆ. ಇದು ನಮ್ಮ ಬದುಕಿಗೆ ಅಪಾಯ.

ಮರಗಳು ನಮಗೆ ಆಮ್ಲಜನಕ ಕೊಟ್ಟು ಹಣ್ಣು, ಹೂವು, ಔಷಧಿ ಕೊಡುತ್ತವೆ. ಹಕ್ಕಿಗಳಿಗೆ ಗೂಡು ಕೊಡುತ್ತವೆ. ಪ್ರಾಣಿಗಳಿಗೆ ಮೇವು ಕೊಡುತ್ತವೆ. ಮನುಷ್ಯನ ಬದುಕಿಗೆ ನೆರಳನ್ನು ಕೊಡುತ್ತವೆ. ನಿಜವಾಗಿಯೂ ಹಸಿರು ಇಲ್ಲದೆ ಬದುಕು ಅಸಾಧ್ಯ.

ಮರಗಳನ್ನು ಕಡಿಯುವುದನ್ನು ನಿಲ್ಲಿಸಿ, ಹೊಸ ಮರಗಳನ್ನು ನೆಡುವುದರಲ್ಲಿ ನಾವು ಎಲ್ಲರೂ ಮುಂದೆ ಬರಬೇಕು. ಶಾಲೆ, ಮನೆ, ಹಳ್ಳಿ, ಊರು ಎಲ್ಲೆಡೆ ಮರ ನೆಡುವ ಕಾರ್ಯಕ್ರಮಗಳನ್ನು ಮಾಡಬೇಕು. ಮಕ್ಕಳು ಕೂಡಾ ಮರಗಳನ್ನು ನೆಟ್ಟು, ಅವುಗಳಿಗೆ ನೀರು ಕೊಟ್ಟು ಬೆಳೆಸಬೇಕು. ಹೀಗೆ ಮಾಡಿದರೆ ಮುಂದಿನ ಪೀಳಿಗೆಯೂ ಶುದ್ಧವಾದ ಗಾಳಿ ಉಸಿರಾಡಬಹುದು.

## ಉಪಸಂಹಾರ

"ಹಸಿರೇ ಉಸಿರು" ಎಂಬ ನುಡಿ ನಮಗೆ ಒಂದು ಸತ್ಯವನ್ನು ನೆನಪಿಸುತ್ತದೆ – ಹಸಿರು ಇಲ್ಲದೆ ಉಸಿರಿಲ್ಲ. ಆದ್ದರಿಂದ ಪ್ರಕೃತಿಯನ್ನು ರಕ್ಷಿಸುವುದು, ಹಸಿರು ಉಳಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ಹಸಿರು ಇದ್ದರೆ ಜೀವ

FOR KANNADA

ಸುಖವಾಗಿರುತ್ತದೆ. ಪರಿಸರ ಸಮತೋಲನವಾಗಿರುತ್ತದೆ. ಹಸಿರನ್ನು ಕಾಪಾಡೋಣ, ಪ್ರಕೃತಿಯನ್ನು ಪ್ರೀತಿಸೋಣ, ಜೀವನವನ್ನು ಉಳಿಸೋಣ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ